'ಇದು ನಿಜವಾಗಿ ಯೋಚಿಸುವಂಥ ವಿಷಯ.'

'ಮನೇಲಿ ಯಾರೂ ಕಾಣಿಸ್ತಿಲ್ಲವಲ್ಲ?'

'ಅತ್ತಿಗೆಯವರು ಎಲ್ಲಿಗೆ ಹೋದರು?'

'ಅವರಿಗೆ ವಿಷಯವೇ ಗೊತ್ತಿಲ್ಲವೇನೋ!'

'ಅತ್ತಿಗೆಯವರನ್ನು ಈಗ ಕರೆಯಬೇಕು.'

'ನೀವು ಒಮ್ಮೆ ಕರೆಯಿರಿ.'

'ನಾನು?'

'ಹೂಂ, ನೀವೇ. ನೀವು ಈ ಮನೆಗೆ ಆಗಾಗ ಬರ್ತಿರ್ತೀರ. ನಿಮ್ಮ ಪರಿಚಯ ಎಲ್ಲರಿಗೂ ಇದೆ. ನೀವೇ ಕರೆಯಿರಿ.'

ಇದನ್ನು ಕೇಳಿ ಆ ವ್ಯಕ್ತಿ ಡೋರ್-ಬೆಲ್ ಒತ್ತುತ್ತಾರೆ. ಗಂಟೆ ಕೇಳಿ ಮನೆಯ ಒಳಗಿನಿಂದ ಕೆಲಸದವಳು ಹೊರಗೆ ಬರುತ್ತಾಳೆ.

ಆ ವ್ಯಕ್ತಿ ಹೇಳುತ್ತಾರೆ, 'ನಿಮ್ಮ ಮಾಲೀಕರು ಇಲ್ಲಿ ಮಲಗಿದ್ದಾರೆ. ಇದು ನಿಮಗೆ ಗೊತ್ತಿಲ್ವ?'

'ಇಲ್ಲ, ನಮಗೆ ಗೊತ್ತಿಲ್ಲ.'

'ನೀವೆಲ್ಲಾ ಮನೆಯೊಳಗೆ ಕೂತು ಏನು ಮಾಡ್ತಿದ್ದೀರ? ಇವರನ್ನು ಒಳಗೆ ಕರ್ಕೊಂಡು ಹೋಗಿ.'

'ಅತ್ತಿಗೆಯವರು ಬೇಡ ಎಂದಿದ್ದಾರೆ.'

'ಬೇಡ ಅಂದ್ರೆ! ಅತ್ತಿಗೆಯನ್ನು ಕರಿ.'

'ಕರೀತೀನಿ' ಎಂದು ಕೆಲಸದವಳು ಮನೆಯೊಳಗೆ ಹೋಗುತ್ತಾಳೆ.

ಸ್ವಲ್ಪ ಹೊತ್ತಿನ ನಂತರ ದಾಸ್ ಬಾಬೂ ಅವರ ಹೆಂಡತಿ ಹೊರಗೆ ಬರುತ್ತಾಳೆ. ಗುಂಪನ್ನು ನೋಡಿ ಕೇಳುತ್ತಾಳೆ, 'ನೀವೆಲ್ಲಾ ನಮ್ಮ ಮನೆ ಎದುರು ಗುಂಪು ಕಟ್ಟಿ ಏಕೆ ನಿಂತಿದ್ದೀರ? ನಿಮಗೇನು ಬೇಕು?'

ಒಬ್ಬ ಹೇಳುತ್ತಾನೆ, 'ನಿಮ್ಮ ಯಜಮಾನ್ರು ಇಲ್ಲಿ ಹೀಗೆ ಬಿದ್ದಿದ್ದಾರೆ. ನಿಮಗೆ ಈ ಬಗ್ಗೆ ಯೋಚನೆಯೇ ಇಲ್ಲ. ಇವರನ್ನು ಮನೆಯೊಳಗೆ ಕರ್ಕೊಂಡು ಹೋಗಿ. ವೈದ್ಯರನ್ನು ಕರೆಯಿಸಿ. ಇಲ್ಲದಿದ್ದರೆ ಒಂದು ನರ್ಸಿಂಗ್ ಹೋಮ್‌ಗೆ ಸೇರಿಸಿ.'

'ನೀವೇ ಈ ಉಪಕಾರ ಮಾಡಿ.'

'ನಾವು?'

'ಹೌದು, ನೀವು. ನಿಮಗೆ ಇವರ ಬಗ್ಗೆ ಅಷ್ಟು ಚಿಂತೆಯಾದರೆ, ನೀವೇ ಇವರಿಗೆ ಚಿಕಿತ್ಸೆ ಕೊಡಿಸಿ. ಇವರನ್ನು ನರ್ಸಿಂಗ್ ಹೋಮ್‌ಗೆ ಸೇರಿಸಿ.'

'ನೀವಿರುವಾಗ ನಾವು ಸೇರಿಸಬೇಕೆ?'

'ಹೌದು, ಇದರಲ್ಲಿ ತೊಂದ್ರೆ ಏನು?'

ಈ ಮಾತು ಕೇಳಿ ಎಲ್ಲರೂ ಪರಸ್ಪರ ಮುಖ ನೋಡಿಕೊಳ್ಳುತ್ತಾರೆ. ಈಗ ಏನು ಮಾಡುವುದು? ಅವರಿಗೆ ಅರ್ಥವಾಗುತ್ತಿಲ್ಲ. ಅರ್ಥವಾಗದ್ದರಿಂದ ಒಬ್ಬೊಬ್ಬರಂತೆ ಎಲ್ಲರೂ ತಮ್ಮ-ತಮ್ಮ ಹಾದಿ ಹಿಡಿಯುತ್ತಾರೆ. ದಾಸ್ ಬಾಬೂ ಅವರ ಹೆಂಡತಿ ಅಡುಗೆ ಮನೆಗೆ ಹೋಗುತ್ತಾಳೆ. ಆದರೆ ಅವಳು ತುಂಬಾ ವ್ಯಗ್ರಳಾಗಿದ್ದಾಳೆ. ಈಗೇನು ಮಾಡುವುದು? ಅವಳಿಗೆ ಏನೂ ಹೊಳೆಯುತ್ತಿಲ್ಲ. ವೈದ್ಯರನ್ನು ಕರೆಯಿಸುವುದು ಅವಶ್ಯಕ. ಇಲ್ಲದಿದ್ದರೆ, ಪರಿಸ್ಥಿತಿ ಬಿಗಡಾಯಿಸಬಹುದು. ಆದರೆ ಸಮಸ್ಯೆ ಎಂದರೆ ಬೆಳ್ಳಂಬೆಳಿಗ್ಗೆ ಎಲ್ಲೂ ಯಾವ ವೈದ್ಯರೂ ಸಿಗುವುದಿಲ್ಲ. ಸಮೀಪದಲ್ಲಿಯೇ ನರ್ಸಿಂಗ್ ಹೋಮ್ ಇದೆ. ಅಲ್ಲಿಗೆ ಕರೆದುಕೊಂಡು ಹೋಗಬೇಕು. ಆದರೆ ಯಾರು ಕರೆದುಕೊಂಡು ಹೋಗುವುದು? ಮಗ ಅಥವಾ ಸೊಸೆ ಈಗ ತಮ್ಮ ಕಚೇರಿ ಬಿಟ್ಟು ಇಲ್ಲಿಗೆ ಬರುವರೇ? ಆದರೂ ಅವರಿಗೆ ವಿಷಯ ತಿಳಿಸುವುದು ಅವಶ್ಯಕ.

ದಾಸ್ ಬಾಬೂ ಅವರ ಹೆಂಡತಿ ತಮ್ಮ ಮಗನಿಗೆ ಮೊಬೈಲ್ ಕರೆ ಮಾಡಿ ಹೇಳುತ್ತಾಳೆ, 'ನಿನ್ನಪ್ಪ ಇನ್ನೂ ಅಲ್ಲಿಯೇ ಮಲಗಿದ್ದಾರೆ. ಈಗ ಅವರನ್ನು ನರ್ಸಿಂಗ್ ಹೋಮ್‌ಗೆ ಸೇರಿಸಲೇ ಬೇಕು ಅಂತ ಅನ್ನಿಸುತ್ತೆ.'

'ಏನಾಯ್ತೀಗ, ನೀನೇ ಹೋಗಿ ಸೇರಿಸು.'

'ನಾನು ಎಪ್ಪತ್ತು ವರ್ಷದ ಮುದುಕಿ. ಇದನ್ನೆಲ್ಲಾ ಹೇಗೆ ಮಾಡಲು ಸಾಧ್ಯ?'

'ನಾನೇನೂ ಮಾಡಲಾರೆ. ಅಪ್ಪ ಹಾಗೆಯೇ ಮಲಗಿರಲಿ' ಎಂದು ಮಗ ಮೊಬೈಲ್ ಆಫ್ ಮಾಡುತ್ತಾನೆ.

ಈಗ ದಾಸ್ ಬಾಬೂ ಅವರ ಹೆಂಡತಿ ಸೊಸೆಗೆ ಮೊಬೈಲ್ ಕರೆ ಮಾಡಿ, ವಿಷಯ ತಿಳಿಸಿ ಹೇಳುತ್ತಾಳೆ, 'ನನಗೊಂದೂ ಹೊಳೆಯುತ್ತಿಲ್ಲ, ಈಗ ನಾನೇನು ಮಾಡ್ಲಿ?'

'ನೀವು ನಿಮ್ಮ ಮಗನಿಗೆ ಹೇಳಿ' ಎಂದು ಸೊಸೆ ಮೊಬೈಲ್ ಆಫ್ ಮಾಡುತ್ತಾಳೆ.

ದಾಸ್ ಬಾಬೂ ಅವರ ಹೆಂಡತಿ ಮತ್ತಷ್ಟು ವ್ಯಗ್ರಳಾಗುತ್ತಾಳೆ. ತಾನೇನು ಮಾಡುವುದು? ತಿಳಿಯುತ್ತಿರಲಿಲ್ಲ. ನಂತರ ಅವಳು ಅವರು-ಇವರಿಗೆ ಫೋನ್ ಮಾಡುತ್ತಾಳೆ. ಎಲ್ಲರೂ ಫೋನ್‌ನಲ್ಲಿ